ಒ ಎಸ್ 270/2023 ಪಿ.ಡಬ್ಲ್ಯೂ 1

ಇಂದು ದಿಃ 21.08.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಬಿ ವಕೀಲರಿಂದಃ

ನಾನು ಮದುವೆಯಾಗಿ 50 ವರ್ಷಗಳಾಗಿವೆ. ಮದುವೆಯಾದ ನಂತರ ನನ್ನ ತಾಯಿಯನ್ನುನೋಡಲು ಮತ್ತು ಹಬ್ಬಹರಿದಿನಗಳಿಗೆ ಮಾತ್ರ ನನ್ನ ತಾಯಿ ನೋಡಲು ಊರಿಗೆ ಬರುತ್ತಿದ್ದೆ. ದೊಡ್ಡಪ್ಪ ಮತ್ತು ಪುಟ್ಟಮ್ಮ ನನ್ನ ಅಜ್ಜಿ ಮತ್ತು ತಾತ. ನನ್ನ ತಾತ ಮತ್ತು ಅಜ್ಜಿಗೆ ಮಾದಮ್ಮ, ನಾಗಮ್ಮ, ಮಹದೇವಮ್ಮ ಯಾನೆ ಪಾರ್ವತಮ್ಮ ಎಂಬ ಮಕ್ಕಳು. ಆ ಪೈಕಿ ನಾಗಮ್ಮರವರಿಗೆ ಮದುವೆ ಆಗಿರಲಿಲ್ಲ. ಮಾದಮ್ಮ ಬೊಕ್ಕಹಳ್ಳಿಗೆ ಮದುವೆಯಾಗಿದ್ದರು, ಅವರಿಗೆ ಮಕ್ಕಳು ಇರಲಿಲ್ಲ. ಅವರ ಗಂಡ ಇರುವ ಬಗ್ಗೆ ನನಗೆ ಗೊತ್ತೇ ಇಲ್ಲ. ನನ್ನ ಅಜ್ಜ ಮತ್ತು ಅಜ್ಜಿ ಜೀವಂತ ಇರುವಾಗಲೇ ನನ್ನ ದೊಡ್ಡಮ್ಮ ಮತ್ತು ತಾಯಿ ವಿಭಾಗ ಆಗಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ತಾಯಿಗೆ ಗಂಡು ಸಂತಾನ ಇಲ್ಲದ ಕಾರಣ ಮಲ್ಕುಂಡಿಯಿಂದ ಹೆಗ್ಗಡಹಳ್ಳಿಗೆ ನನ್ನ ತಂದೆ ಬಂದು ಉಳಿದುಕೊಂಡರು ಎಂದರೆ ಸರಿ. ನನ್ನ ತಾಯಿ ಚಿಕ್ಕಪ್ಪ ಮತ್ತು ಅತ್ತೆಯ ವಿರುದ್ಧ ವಿಭಾಗದ ದಾವೆ ಸಲ್ಲಿಸಿದ ಬಗ್ಗೆ ಗೊತ್ತಿಲ್ಲ. ಮಲ್ಕುಂಡಿಯಲ್ಲಿರುವ ಆಸ್ತಿಯು ನನ್ನ ತಾಯಿಗೆ ವಿಭಾಗದಲ್ಲಿ ಬಂದ ಆಸ್ತಿಯಾಗಿದ್ದು ಅವರು ಅಲ್ಲಿ ವಾಸ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನನ್ನ ದೊಡ್ಡಮ್ಮ ನಾಗಮ್ಮ ಮೃತರಾಗಿ 3 ವರ್ಷ ಆಗಿದೆ. ವಿಭಾಗದವಾದ ಮೇಲೆ ನನ್ನ ದೊಡ್ಡಮ್ಮನಿಗೆ ಬಂದ ಕೆಲವು ಆಸ್ತಿಗಳು ಬೇರೆ ಬೇರೆ ಸರ್ವೆ ನಂಬರ್ ಸೇರಿ ನಾಗಮ್ಮನಿಗೆ ಒಟ್ಟು 3 ಎಕರೆ 11 ½ ಗುಂಟೆ ಜಮೀನು ಅವರ ಪಾಲಿಗೆ ಬಂದಿತ್ತು ಎಂದರೆ ಸರಿಯಲ್ಲ. ನಾಗಮ್ಮ ಮೃತರಾದಾಗ ನಾವೆಲ್ಲ ಹೋಗಿದ್ದೆವು.

ನಾಗಮ್ಮನಿಗೆ ಬಂದ ಆಸ್ತಿಯನ್ನು ಪ್ರತಿವಾದಿಗೆ ದಿನಾಂಕ 09.10.2020ರಲ್ಲಿ ಅವರ ಜೀವಿತ ಕಾಲದಲ್ಲಿ ಮರಣ ಶಾಸನ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಬರೆದ ವಿಲ್ ನಾಮೆ ಬಗ್ಗೆ ನನಗೆ ಗೊತ್ತು ಎಂದರೆ ಸರಿಯಲ್ಲ. ವಿಲ್ ಮೂಲಕ ಬಂದ ಆಸ್ತಿಯನ್ನು ಪ್ರತಿವಾದಿ ಮಗ ಮಹೇಶ ಸ್ವಾಧಿನ ಮಾಡಿಕೊಂಡು ಇದ್ದಾರೆ ಎಂದರೆ ಸುಳ್ಳು. ನಾಗಮ್ಮ ಮೃತರಾಗುವ 1 ವಾರದವರೆಗೂ ಚೆನ್ನಾಗಿದ್ದು ಅವರಿಗೆ ಕಣ್ಣು ಕಾಣುತ್ತಿತ್ತು ಮತ್ತು ಅವರು ಮೈಸೂರಿಗೆ ಓಡಾಡುತ್ತಿದ್ದರು ಮತ್ತು ನಮ್ಮನ್ನು ನೋಡಲು ಬರುತ್ತಿದ್ದರು ಎಂದರೆ ಸರಿಯಲ್ಲ.

ನಮ್ಮ 3 ಜನ ಸಹೋದರಿಯರ ಮದುವೆಗಳನ್ನು ಪ್ರತಿವಾದಿಯೇ ಮಾಡಿಸಿದ್ದರು ಎಂದರೆ ಸುಳ್ಳು. ಒಂದು ಸಲ ಗೌರಿ ಹಬ್ಬಕ್ಕೆ ನನ್ನ ತಾಯಿ ಮನೆಗೆ ಬಂದಾಗ ನಾವೆಲ್ಲರೂ ಕೂತು ಮಾತನಾಡಿ ವಿಭಾಗ ಪತ್ರವನ್ನು 2021ರಲ್ಲಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ ಮತ್ತು ನಮಗೆಲ್ಲ ತಲಾ ರೂ 2 ಲಕ್ಷ ರೂ

ಕೊಟ್ಟಿದ್ದರು ಎಂದರೆ ಸರಿಯಲ್ಲ. 2 ಲಕ್ಷ ಹಣ ಪಡೆದುಕೊಂಡಿದ್ದರೂ ಸಹ ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾಗಮ್ಮನಿಗೆ ಬಂದ ಆಸ್ತಿಯನ್ನು ಸೇರಿಸದ ಕಾರಣ ದಾವಾ ಆಸ್ತಿಯಲ್ಲಿ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಉಳಿದ ಆಸ್ತಿಗಳಿಗೆ ನಾವೆಲ್ಲರೂ ಹಣ ಪಡೆದು ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟ ಕಾರಣ ಇತರೆ ಆಸ್ತಿಯಲ್ಲಿ ನಮಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಿಲ್ ನಾಮೆ ಮೂಲಕ ಬಂದ ಆಸ್ತಿಯ ಖಾತೆಯು ಪ್ರತಿವಾದಿ ಮಗನಾದ ಮಹೇಶ ಹೆಸರಿನಲ್ಲಿ ಖಾತೆಯಾಗಿದ್ದು, ಅವರನ್ನು ಪಕ್ಷಗಾರರನ್ನಾಗಿ ಮಾಡದೇ ನನ್ನ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ನಂಜನಗೂಡಿನಲ್ಲಿ ಪಿತ್ರಾರ್ಜಿತವಾಗಿ ಖರೀದಿಸಿದ ಮನೆ ಇದ್ದು ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.